ದಿನಾಂಕಃ **05.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು **3** ನೇ ಎದುರುದಾರರ ಪರ ಶ್ರೀ ಡಿಜಿಪಿ ವಕೀಲರಿಂದಃ-</u>

ಭೂ ಸ್ವಾಧೀನಪಡಿಸಿಕೊಂಡ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನಿನಲ್ಲಿ ಸ್ವಾಧೀನಪಡಿಸಿಕೊಂಡ ಸಮಯದಲ್ಲಿ ಯಾವುದೇ ಬೆಳೆ ಬೆಳೆಯುತ್ತಿರಲಿಲ್ಲ ಅಂದರೆ ಸರಿ. ಜಮೀನಿಗೂ ಮತ್ತು ರಸ್ತೆ ಗೂ ಅರ್ಧ ಕಿಮೀ ಅಂತರವಿದೆ ಅಂದರೆ ಸರಿ . ತಮ್ಮ ಜಮೀನಿನ ಅಕ್ಕ ಪಕ್ಕ ಯಾವುದೇ ಮನೆಗಳು ಇಲ್ಲ, ಆದರೆ ಸ್ವಲ್ಪ ದೂರದಲ್ಲಿ ಇದೆ. ಭೂ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಕಡಿದ ಮರಗಳು ಎಸ್ ಎಲ್ ಎ ಓ ರವರು ಅಲ್ಲಿಯೇ ಬಿಟ್ಟು ಹೋಗಿರುತ್ತಾರೆ ಅಂದರೆ ನನಗೆ ಮಾಹಿತಿ ಇಲ್ಲ. ಭೂ ಸ್ವಾಧೀನಪಡಿಸಿಕೊಂಡ ಸಮಯದಲ್ಲಿ ಹಳೆಯ ಕಾಲದ ಬಾವಿ ಇತ್ತು ಅಂದರೆ ಸರಿ. ಸದರಿ ಬಾವಿಗೆ ಸಂಬಂದಪಟ್ಟಂತೆ ಯಾವುದೇ ದಾಖಲಾತಿ ಇಲ್ಲ. ಸದರಿ ಬಾವಿಯು ಸುಮಾರು 70 ವರ್ಷದ ಹಿಂದಿನ ಹಳೆಯದ್ದು.

ಸದರಿ ಜಮೀನು ಗುಂಟೆಗೆ 2 ಲಕ್ಷ ಬೆಲೆ ಬಾಳುತ್ತಿತ್ತು ಎಂದು ತೋರಿಸಲು ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ಕುರಿತು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಭೂ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆಯದ ಕಾರಣ ಯಾವುದೇ ಆದಾಯ ಬರುತ್ತಿರಲಿಲ್ಲ ಅಂದರೆ ಸರಿಯಲ್ಲ . ಒಂದು ಎಕರೆಗೆ

80 ಲಕ್ಷ ಬೆಲೆ ಬಾಳುತ್ತಿತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಸಲ್ಲಿಸಿರುತ್ತೇನೆ. ಆ ರೀತಿ ಯಾವುದೇ ದಾಖಲಾತಿಗಳು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆಯುವ ಸಮಯದಲ್ಲಿ ಎಸ್ ಎಲ್ ಎ ಒ ರವರ ಮುಂದೆ ಯಾವುದೇ ತಕರಾರು ಅರ್ಜಿಯನ್ನು ಸಲ್ಲಿಸಿಲ್ಲ ಅಂದರೆ ಸರಿ. ಸ್ಥಳಕ್ಕೆ ಅಧಿಕಾರಿಗಳು ಬಂದು ಮಹಜರ್ ಮಾಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೂ ಮತ್ತು ಶಿರಾಕ್ಕೂ 13 ಕಿಮೀ ಅಂತರವಿದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 10 ಕಿಮೀ ಅಂತರವಿರುತ್ತದೆ. ಸಾಮಾನ್ಯವಾಗಿ ಯಾವುದೇ ವಸ್ತುಗಳನ್ನು ಖರೀದಿ ಮಾಡಬೇಕಾದರೆ ಶಿರಾ ಅಥವಾ ಕಳ್ಳಂಬೆಳ್ಳಕ್ಕೆ ಬರಬೇಕಾಗುತ್ತದೆ ಅಂದರೆ ಸರಿ.

ನಿಪಿ-13 ರ ಕ್ರಯಪತ್ರವು ಕೇವಲ ಒಂದು ಕಾಲು ಗುಂಟೆ ಖರೀದಿ ಆಗಿರುವ ಜಮೀನು ಅಂದರೆ ಸರಿ. ಸದರಿ ಕ್ರಯಪತ್ರಕ್ಕೆ ಒಳಪಟ್ಟ ಜಮೀನು ತಮ್ಮ ಸರ್ವೇ ನಂಬರ್ ಅಲ್ಲ ಅಂದರೆ ಸರಿ. ಸದರಿ ಕ್ರಯಪತ್ರದಲ್ಲಿ ಒಳಪಟ್ಟಿರುವ ಜಮೀನು 2 ಕಡೆ ಮುಖ್ಯರಸ್ತೆ ಇರುತ್ತದೆ ಅಂದರೆ ಸರಿ. Sy.no.248/17 ಕ್ಕೆ ಸಂಬಂದಪಟ್ಟ ರೆವಿನ್ಯೂ ನಕ್ಷೆ ಅಂದರೆ ಸರಿ. ನಿಪಿ-14 ಸರ್ಟಿಫಿಕೇಟ್ ಇತ್ತೀಚೆಗೆ ಹಾಕಿಸಿಕೊಂಡು ಬಂದಿರುವ Estimate (ಅಂದಾಜು) ಅಂದರೆ ಸರಿ. ಸದರಿ ನಿಪಿ-14 ರಲ್ಲಿ ಯಾವುದೇ ದಿನಾಂಕವಿಲ್ಲ ಅಂದರೆ ಸರಿ. ಸೂಕ್ತವಾದ ಮತ್ತು ವೈಜ್ಞಾನಿಕವಾದ

ಪರಿಹಾರವನ್ನು ನೀಡಿದ್ದರು ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸಲ್ಲಿಸಿರುವ ಅರ್ಜಿಯು ಕಾಲಪರಿಮಿತಿಯ ಒಳಗೆ ಇರುವುದಿಲ್ಲ ಅಂದರೆ ಸರಿಯಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು